ಅಕೌಂಟೆಂಟ್‌ರವರನ್ನು ನೇಮಕ ಮಾಡುತ್ತಿದ್ದೇವೆ. ಅವರನ್ನು ಆ ಜಿಲ್ಲೆಯಿಂದ ಹೊರಗಡೆ ಕಳುಹಿಸುವ ಹಾಗಿಲ್ಲ. ಬೇರೆ ಕೆಲಸಕ್ಕೂ ಕೂಡ ಅವರನ್ನು ನೇಮಿಸುವುದಕ್ಕೆ ಆಗುತ್ತಿಲ್ಲ. ಅದುದರಿಂದ ನಾವು ಅವರಿಗೆ ಎಸ್.ಡಿ.ಸಿ.ಗೂ ಇವರಿಗೂ ಇಂಟರ್‌ಚೇಂಜ್ ಮಾಡುವುದಕ್ಕೆ ಸಾಧ್ಯವೇ ಎಂದು ನಾವು ಈಗಾಗಲೇ ಕಾನೂನು ಇಲಾಖೆಯವರೊಂದಿಗೆ ಸಮಾಲೋಚನೆ ಮಾಡುತ್ತಿದ್ದೇವೆ. ಇದರ ಬಗ್ಗೆ ನಾನು ಆದಷ್ಟು ಬೇಗ ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಎಂಬ ಭರವಸೆ ಕೊಡುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೇ, ಈಗ ಏನಾಗಿದೆ ಎಂದರೆ ಮೊನ್ನೆ ತಾವು ನಗರಸಭೆ ಪುರಸಭೆಗೆ ಒಂದು ತಿದ್ದುಪಡಿಯನ್ನು ಮಾಡಿದ್ದಾರೆ. ಏನಾದರೂ ಖಾತೆ ಬದಲಾವಣೆ ಮಾಡಬೇಕಾದರೆ ಅದನ್ನು ಆಫೀಸ್ ಲೇವಲನಲ್ಲೇ ಸರಿ ಮಾಡತಕ್ಕಂಥ ಒಂದು ವ್ಯವಸ್ಥೆ ಮಾಡಬೇಕು. ಅರಟಿಸಿಯನ್ನು ವಿಲೇಜ್ ಅಕೌಂಟೆಂಟಗಳು ಬೇರೆಯವರ ಹೆಸರಿಗೆ ಬದಲಾವಣೆ ಮಾಡಿದರೆ ತಹಸೀಲ್ದಾರ ಲೇವಲನಲ್ಲಿ ಬದಲಾವಣೆ ಮಾಡತಕ್ಕಂಥ ಒಂದು ವ್ಯವಸ್ಥೆ ತಾವು ತರಬೇಕು. ಆರ್.ಟಿ.ಸಿ. ಬದಲಾವಣೆ ಮಾಡಿದರೆ ನಾವು ನೇರ ಎ.ಸಿ. ಕೋರ್ಟಿಗೆ ಹೋಗಬೇಕು. ಏಕೆಂದರೆ ಮೊನ್ನೆ ಒಂದು ಕೇಸ್ ಆಗಿದೆ. ಅವನು ಬದುಕಿದ್ದಾನೆ. ಸತ್ತುಹೋಗಿದ್ದಾನೆಂದು ಬೇರೆಯವರ ಹೆಸರಿಗೆ ಪಾವತಿ ಖಾತೆ ಮಾಡಿದ್ದಾರೆ. ಯಾವ ಮಟ್ಟದ ಬೆಳವಣಿಗೆ ಆಗಿದೆ ಎಂದರೆ ಅದು ಹೇಳಲಿಕ್ಕೆ ಅಸಾಧ್ಯವಾಗಿದೆ. ನಾನು ಇನ್ನು ಬದುಕಿದ್ದೇನಪ್ಪಾ ನಾನು ಸತ್ತುಹೋಗಿದ್ದೇನೆಂದು ನೀವು ಬೇರೆಯವರ ಹೆಸರಿಗೆ ಖಾತೆ ಮಾಡಿದ್ದೀರಿ ಇದು ಹೇಗೆ? ನಾನು ಇನ್ನು ಬದುಕಿದ್ದೇನೆ ಇನ್ನೂ ಸತ್ತಿಲ್ಲ ಎಂದು ಎ.ಸಿ. ಹತ್ತಿರ ಹೋಗಿ ಪ್ರಮಾಣೀಕರಿಸಬೇಕು.

Sri R.L. JALAPPA : I am sorry for the affairs of the Department. But I cannot help it. I am one with him. ತಹಸೀಲ್ದಾರಿಗೆ ಅಧಿಕಾರ ಕೊಡಲು ಸಾಧ್ಯವೇ ಎಂಬುದನ್ನು ನಾನು ಪರೀಕ್ಷೆ ಮಾಡಿ I will take some action.

ಕಡೂರು ತಾಲ್ಲೂಕಿನ ತೆಂಗಿನ ಮರಗಳಿಗೆ ಕಪ್ಪು ತಲೆಹುಳು ರೋಗ

321 - ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಡೂರು ತಾಲ್ಲೂಕಿನಲ್ಲಿ ತೆಂಗಿನ ಮರಗಳಿಗೆ ಕಪ್ಪುತಲೆ ಹುಳುವಿನ ರೋಗ ತಗುಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಡೂರು ತಾಲ್ಲೂಕು ಶಿಗಟೆಗೆರೆ ಮತ್ತು ಯಾಗತಿ ಹೋಬಳಿಗಳಲ್ಲಿ ಅಣಬೆ ರೋಗ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರ ಇದರ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಈ) ಕಡೂರು ತಾಲ್ಲೂಕಿನಲ್ಲಿ ಎಷ್ಟು ಮರಗಳಿಗೆ ಈ ರೋಗ ತಗುಲಿದೆ;

ಉ) ಈ ರೋಗದಿಂದ ಹಾನಿಯುಂಟಾಗಿರುವ ರೈತರಿಗೆ ಸರ್ಕಾರದಿಂದ ಪರಿಹಾರ ಕೊಡುವಿರಾ?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ಸಚಿವರು) :

ಅ) ಬಂದಿದೆ.

ಆ) ಬಂದಿದೆ.

ಇ) ಕಪ್ಪುತಲೆ ಹುಳುವಿನ ನಿಯಂತ್ರಣಕ್ಕೆ ಸಂಬಂಧಿಸಿದಂತೆ ನಿಯಂತ್ರಣ ಕ್ರಮಗಳನ್ನು ರೈತರಿಗೆ ತಿಳಿಸಲಾಗುತ್ತಿದೆ. ಕಡೂರು ತಾಲ್ಲೂಕಿನಲ್ಲಿ ಪ್ರಸ್ತುತ ಸಾಲಿನಲ್ಲಿ 72,000 ತೆಂಗಿನ ಮರಗಳಿಗೆ ಈ ಭಾದೆ ಕಾಣಿಸಿ ಕೊಂಡಿದೆ. ಈ ಕೀಟ ಹತೋಟಿಗೆ ಕೀಟನಾಶಕಗಳನ್ನು ಖರೀದಿಸಲು ರಾಜ್ಯ ವಲಯದ ಯೋಜನೆಯಡಿ ಚಿಕ್ಕಮಗಳೂರು ಜಿಲ್ಲೆಗೆ ಪ್ರಸ್ತುತ ಸಾಲಿಗೆ ರೂ. 3.00 ಲಕ್ಷಗಳ ಅನುದಾನ ಒದಗಿಸಿದೆ. ಇದಲ್ಲದೆ ಜೈವಿಕ ವಿಧಾನದಿಂದ ಕೀಟ ನಿಯಂತ್ರಣ ಮಾಡಲು ಕಡೂರು ತಾಲ್ಲೂಕಿನಲ್ಲಿ 2 ಪ್ರಯೋಗ ಶಾಲೆಗಳಿದ್ದು, 1995ರ ಜುಲೈ ವರೆಗೆ 1,32,000 ಪರೋಪಜೀವಿಗಳನ್ನು ಉತ್ಪಾದಿಸಿ, 123 ರೈತರ ತೋಟಗಳಲ್ಲಿ ಬಿಡುಗಡೆ ಮಾಡಲಾಗಿದೆ. ಈ ಕಾರ್ಯಕ್ರಮಕ್ಕೆ ಪ್ರಸ್ತುತ ಸಾಲಿಗೆ ಒಟ್ಟು 2.55 ಲಕ್ಷ ರೂ.ಗಳ ಅನುಧಾನವನ್ನು ಒದಗಿಸಿದೆ. ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಅಣಬೆ ರೋಗ ನಿಯಂತ್ರಣಕ್ಕೆ ಸಂಬಂಧಿಸಿದಂತೆ, ಕೇಂದ್ರವತಿಯ ತೆಂಗು ಅಭಿವೃದ್ಧಿ ಮಂಡಳಿ ಸಹಯೋಗದ ಯೋಜನೆಯಡಿ ರೋಗಪೀಡಿತ ತೆಂಗಿನ ಮರಗಳನ್ನು ತೆಗೆಯಲು ಪ್ರತಿ ಮರಕ್ಕೆ ರೂ.200 ರಂತೆ, ಅದೇ ಸ್ಥಳದಲ್ಲಿ ಹೊಸ ಸಸಿ ನೆಡಲು ರೂ. 5 ರಂತೆ, ಸಸ್ಯ ಸಂರಕ್ಷಣೆ ಔಷಧಿ ಮತ್ತು ಗೊಬ್ಬರಕ್ಕೆ ರೂ. 8 ರಂತೆ ಮತ್ತು ಮಿಶ್ರ ಬೇಸಾಯ ಪ್ರತಿ ಹೆಕ್ಟೇರಿಗೆ ರೂ. 200 ರಂತೆ ಸಹಾಯಧನ ನೀಡಲಾಗುತ್ತಿದೆ. ಕಡೂರು ತಾಲ್ಲೂಕಿಗೆ 700 ಹೆಕ್ಟೇರ್ ಭೌತಿಕ ಮತ್ತು ರೂ. 20.48 ಲಕ್ಷ ಆರ್ಥಿಕ ಗುರಿ ಇರುತ್ತದೆ.

ಈ) ಕಪ್ಪುತಲೆ ಹುಳುವಿನ ಬಾಧೆ 72,000 ಮರಗಳಿಗೂ ಮತ್ತು ಅಣಬೆ ರೋಗ 4,000 ಮರಗಳಿಗೂ ತಗುಲಿದೆ.

ಉ) ಮೇಲೆ ಹೇಳಿದಂತೆ ರೋಗಪೀಡಿತ ತೆಂಗಿನ ಮರಗಳನ್ನು ತೆಗೆಯಲು ಆ ಸ್ಥಳದಲ್ಲಿ ಹೊಸ ಗಿಡ ನೆಡಲು, ಸಸ್ಯ ಸಂರಕ್ಷಣೆ ಔಷಧಿ, ಗೊಬ್ಬರ ಒದಗಿಸಲು ಮತ್ತು ಮಿಶ್ರ ಬೇಸಾಯ ಕೈಗೊಳ್ಳಲು ತೆಂಗು ಅಭಿವೃದ್ಧಿ ಮಂಡಳಿಯ ಯೋಜನೆಯಡಿ ಸಹಾಯ ಧನವನ್ನು ನೀಡಲಾಗುತ್ತಿದೆ.

10.30 ಪಿ.ಎಂ

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಒದಗಿಸಿರುವ ಉತ್ತರ ಎಷ್ಟು ಅಸ್ಪಷ್ಟವಾಗಿದೆ ಎಂದು ಹೇಳಿದರೆ, ಅಣಬೆ ರೋಗ 4 ಸಾವಿರ ಮರಗಳಿಗೆ ತಗಲಿದೆಯೆಂದು ಹೇಳಿದ್ದಾರೆ. ಮತ್ತು 72 ಮರಗಳಿಗೆ ಇಲಾಖೆಯ ಅಧಿಕಾರಿಗಳ ಮುಖಾಂತರ ರೋಗ ನಿಯಂತ್ರಣಕ್ಕೆ ಕ್ರಮವನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಈಗಾಗಲೇ ತೆಂಗಿನ ಮರಗಳಿಗೆ ಎರಡು ರೀತಿಯ ರೋಗ ತಗಲಿದೆ. ಈಗಾಗಲೇ ಯಗಟಿ ಬೀರೂರು ಹೋಬಳಿಯಲ್ಲಿ ಕಪ್ಪುತಲೆ ಹುಳು ರೋಗ ಸುಮಾರು 72 ಸಾವಿರ ಮರಗಳಿಗೆ ತಗಲಿದೆ. 1992ನೇ ಇಸವಿಯಿಂದಲೂ ಈ ರೋಗ ತಗಿಲಿದ್ದರೂ

ಅಧ್ಯಕ್ಷರು : ನಿಮ್ಮದು ಉಪ ಪ್ರಶ್ನೆ ಏನಿದೆ ಅದನ್ನು ಹೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಇವರು ಕೊಟ್ಟಿರುವ ಉತ್ತರದಲ್ಲಿ 4 ಸಾವಿರ ಮರಗಳಿಗೆ ಈ ರೋಗ ತಗಲಿದ್ದರೂ ಕೂಡ ಕೇವಲ 72 ಮರಗಳಿಗೆ ರೋಗವನ್ನು ನಿಯಂತ್ರಣ ಮಾಡುವುದುಕ್ಕೆ ಕ್ರಮವನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. 4 ಸಾವಿರ ಮರಗಳಿಗೆ ಅಣಬೆ ರೋಗ ಬಂದಿರುವಾಗ ಕೇವಲ 72 ಮರಗಳಿಗೆ ರೋಗ ನಿಯಂತ್ರಣ ಕ್ರಮ ತೆಗೆದುಕೊಂಡಿರುವುದು ಸರಿಯೇ?

ಅಧ್ಯಕ್ಷರು : ನೀವು ಉತ್ತರವನ್ನು ಏನು ಕೊಟ್ಟಿದ್ದಾರೆ ಅದನ್ನು ಸರಿಯಾಗಿ ಓದಿ. ಕಪ್ಪು ತಲೆ ಹುಳುವಿನ ಬಾಧೆ 72 ಸಾವಿರ ಮರಗಳಿಗೂ ಮತ್ತು 4 ಸಾವಿರ ಮರಗಳಿಗೆ ಅಣಬೆ ರೋಗ ತಗಲಿದೆ ಎಂದು ಹೇಳಿದ್ದಾರೆ. ಅದೇ ಬೇರೆ ರೋಗ, ಇದೇ ಬೇರೆ ರೋಗ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಹೌದು, ಎರಡೂ ರೋಗ ಇದೆ, ಸಿಂಗಟಕೆರೆ ಹೋಬಳಿಯಲ್ಲಿ ಅಣಬೆ ರೋಗ ತಗಲಿದೆ, ಯಗಟಿ, ಕಸಬಾ, ಬೀರೂರು ಹೋಬಳಿಯಲ್ಲಿ ಕಪ್ಪು ತಲೆ ಹುಳ ರೋಗ ಇದೆ. ಈ ಎರಡಕ್ಕೂ ಈಗ ಏನು ನಿಯಂತ್ರಣ ಕ್ರಮವನ್ನು ತೆಗೆದುಕೊಂಡಿದ್ದಿರೋ ಅದು ಸಾಲದು. ಅದರ ಬಗ್ಗೆ ತಿಳಿಸಬೇಕು.

ಶ್ರೀ ಡಿ.ಬಿ. ಜಯಕುಮಾರ್ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ.

ಅಧ್ಯಕ್ಷರು : ನಾನು ಅವರಿಗೆ ಹೇಳಿಕೊಳ್ಳುತ್ತೇನೆ ಬಿಡಿ. ಅವರು ಹೇಳುವುದೇನೆಂದರೆ, ಈಗ ನೀವು ತೆಗೆದುಕೊಂಡಿರತಕ್ಕಂಥ ಕ್ರಮಗಳು ಸಾಕಷ್ಟು ಸಮರ್ಪಕವಾಗಿಲ್ಲ. ಇನ್ನೂ ಹೆಚ್ಚು ವ್ಯಾಪಕವಾದ ಕ್ರಮಗಳನ್ನು ಹಮ್ಮಿಕೊಂಡು ಈ ರೋಗ ಹಬ್ಬದಂತೆ ತಡೆಗಟ್ಟಲು ಪ್ರಯತ್ನ ಮಾಡುತ್ತೇವೆ ಎಂದು ಹೇಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರೇ : ಸಗೀರ್ ಅಹಮದರವರೇ, ನಿಮ್ಮದು ಬಹಳ ಬೇಸರವಾಗಿ ಬಿಡುತ್ತದೆ ನಮಗೆ. ಏಕೆಂದರೆ ನೀವು ಮುನಿಸಿಪಾಲಟಿಯಿಂದ ಹಿಡಿದು ಹೋಮ್ ಡಿಪಾರ್ಟಮೆಂಟ್, ತೆಂಗಿನ ಮರ, ಕಾಫಿ ತೋಟ, ಅಕ್ರಮ ಸಕ್ರಮ, ವಾಸುದೇವನ್ ಪ್ರಕರಣ ಎಲ್ಲದಕ್ಕೂ ಬಂದು ಬಿಡುತ್ತೀರಿ. ಆಲ್ ಇಂಡಿಯಾ ಸಗೀರ್ ಅಹಮದ್.

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಕೃಷಿ ಇಲಾಖೆಯವರು ಬೇಕಾದಷ್ಟು ಪ್ರಯೋಗ ಶಾಲೆಗಳನ್ನು ಕೋಟ್ಯಾಂತರ ರೂ.ಗಳನ್ನು ಖರ್ಚು ಮಾಡಿದ್ದಾರೆ. ಅಡಿಕೆ ತೋಟಕ್ಕೆ ಮತ್ತು ತೆಂಗಿನ ಮರಗಳಿಗೆ ಅಣಬೆ ರೋಗ ಬರದ ಹಾಗೆ ಮಾಡುವುದಕ್ಕೆ ಇವೊತ್ತಿಗೂ ಕೂಡ ಔಷಧಿ ಕಂಡುಹಿಡಿಯುವುದಕ್ಕೆ ಆಗಿಲ್ಲ. ಒಂದೊಂದು ಏಕರೆಯ ಅಡಿಕೆ ತೋಟದಲ್ಲಿ ಕನಿಷ್ಟ ಪಕ್ಷ 50 ರಿಂದ 150 ಈ ಅಣಬೆ ರೋಗದಿಂದ ಸಾಯುತ್ತಿವೆ. ಇವೊತ್ತಿಗೂ ಕೂಡ ಇದಕ್ಕೆ ಪರಿಹಾರ ಕಂಡುಹಿಡಿಯುವುದಕ್ಕೆ ಇಲಾಖೆಗೆ ಆಗಿಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಈ ರೋಗವನ್ನು ನಿಯಂತ್ರಣ ಮಾಡುವುದಕ್ಕೆ ಈಗ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಅದು ಸಾಲದು. ರಾಜ್ಯ ಮಟ್ಟದ ಅಧಿಕಾರಿಗಳಾಗಲೀ ಅಥವಾ

ಸಚಿವರೇ ಖುದ್ದಾಗಿ ಬಂದು ನೋಡಿದರೆ ರೈತರಿಗೆ ಏನು ಅನ್ಯಾಯವಾಗಿದೆ ಎಂಬುದು ಅವರಿಗೇ ಗೊತ್ತಾಗುತ್ತದೆ.

ಅಧ್ಯಕ್ಷರು : ಅಧಿವೇಶನ ಮುಗಿದ ಮೇಲೆ ಬರುತ್ತಾರೆ ಬಿಡಿ. ಮಂತ್ರಿಗಳೇ, ನೀವು ಒಂದು ದಿವಸ ಹೋಗಿ ಬನ್ನಿ.

ಶ್ರೀ ಸಿ. ಭೈರೇಗೌಡ : ಮಾನ್ಯ ಸದಸ್ಯರು ಕೇಳುತ್ತಿರುವುದರಿಂದ ತಾವು ಒಪ್ಪಿಗೆ ಕೊಟ್ಟರೆ ಉತ್ತರವನ್ನು ಹೇಳಬೇಕಾಗಿದೆ. ಕೆಲವು ರೋಗಗಳು ಏನಿವೆ ಅವುಗಳನ್ನು ನಾವು ಇಲ್ಲಿಯವರೆವಿಗೂ ಸಂಪೂರ್ಣವಾಗಿ ತೊಡದುಹಾಕುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದನ್ನು ನಾನು ಕೇವಲ ಸಸ್ಯಗಳಿಗೆ ಸಂಬಂಧಪಟ್ಟಂತೆ ಮಾತ್ರ ನಾನು ಹೇಳುತ್ತಿಲ್ಲ. ಮನುಷ್ಯನಿಗೆ ಸಂಬಂಧಪಟ್ಟಂಥ ಕೆಲವು ರೋಗಗಳೂ ಕೂಡ ಇದೆ. ಉದಾಹರಣೆಗೆ ಮನುಷ್ಯನಿಗೆ ನೆಗಡಿ ಬರುತ್ತದೆ. ಇದು ಸಾಮಾನ್ಯ ಕಾಯಿಲೆ. ನೆಗಡಿಗೆ ಇಲ್ಲಿಯವರೆವಿಗೂ ಔಷಧಿಯನ್ನೇ ಕಂಡುಹಿಡಿದಿಲ್ಲ. ಅದೇ ರೀತಿ ಸಸ್ಯಗಳಿಗೂ ಸಂಬಂಧಪಟ್ಟಂತೆ ಕೆಲವು ರೋಗಗಳಿಗೆ ಪರಿಣಾಮಕಾರಿಯಾಗಿ ಸಂಪೂರ್ಣವಾಗಿ ತಡೆಗಟ್ಟಲು ಔಷಧಿಯನ್ನು ಕಂಡುಹಿಡಿಯಲು ಇಲ್ಲಿಯವರೆವಿಗೂ ಆಗಿಲ್ಲ. ಆದರೆ ನಿಯಂತ್ರಣ ಮಾಡಲಿಕ್ಕೆ ಔಷಧಿಗಳಿವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಸಭಾಧ್ಯಕ್ಷರೇ, ಈ ಕಪ್ಪು ತಲೆ ಹುಳು ರೋಗಕ್ಕೆ ಸಂಬಂಧಪಟ್ಟ ಹಾಗೆ ಔಷಧಿ ಕೊಡುವ ವ್ಯವಸ್ಥೆಯಲ್ಲಿ ಏನಾಗಿದೆಯೆಂದರೆ, 5000 ಮರಗಳಿಗೆ ಔಷಧಿಯನ್ನು ಕೊಟ್ಟು ಪಕ್ಕದಲ್ಲಿ ಒಂದು 50 ಮರಗಳಿಗೆ ಔಷಧಿ ಕೊಡದೇ ಬಿಟ್ಟು ಬಂದರೆ ಮತ್ತೆ ಎಲ್ಲಾ 5000 ಮರಗಳಿಗೂ ಈ ರೋಗ ಬರುತ್ತದೆ. ಸಾಮಾನ್ಯವಾಗಿ ಈ ರೋಗ ಮಳೆ ಎಲ್ಲಿ ಹೆಚ್ಚಾಗಿ ಬೀಳುವುದಿಲ್ಲವೋ ಅಲ್ಲಿ ಹೆಚ್ಚಾಗಿ ಈ ರೋಗ ಕಂಡುಬರುತ್ತದೆ. ಈ ರೋಗ ಉಲ್ಬಣಗೊಂಡರೆ ಎಲ್ಲಾ ಗರಿಗಳನ್ನು ತೆಗೆಯತಕ್ಕಂಥ ವ್ಯವಸ್ಥೆಯನ್ನು ಮಡಬೇಕಾಗುತ್ತದೆ. ಆದರೆ ಈಗ ಏನಾಗಿದೆ ಮೊಬೈಲ್ ವ್ಯಾನ್ ಮೂಲಕ ಔಷಧಿಯನ್ನು ಒಂದು ಟೀಮ್ ಹೋಗಿ ಇಂಜಕ್ಷನ್ ಮೂಲಕ, ಬಾಟಲ್ ಮೂಲಕ ಸರಬರಾಜು ಮಾಡುವ ವ್ಯವಸ್ಥೆ ಏನಿದೆ, ಏಕೆ ಇದನ್ನು ಹೇಳುತ್ತಿದ್ದೆನೆಂದರೆ ನಾನು ನನ್ನ ಎರಡುಮೂಕ್ಕಾಲು ಏಕರೆಯಲ್ಲಿ ನಾನೇ ನಿಂತು ಕೊಂಡು ಈ ರೀತಿಯಲ್ಲಿ ಔಷಧಿಯನ್ನು ಕೊಡಿಸಿದ್ದೇನೆ. ಒಂದೇ ಒಂದು ಚೂರು ರೋಗವಿಲ್ಲ. ನಾನು ಒಬ್ಬನೇ ನಮ್ಮತೋಟಕ್ಕೆ ಮಾಡಿಸಿಕೊಳ್ಳಲಿಲ್ಲ. ಸುತ್ತಮುತ್ತ ಇರುವ ಎಲ್ಲಾ ರೈತರನ್ನು ಕರೆಯಿಸಿ, ತೋಟದವರನ್ನೂ ಕರೆಯಿಸಿ ಒಂದು ಟೀಮ್ ಮಾಡಿ ಔಷಧಿಯನ್ನು ಎಲ್ಲಾ ಮರಗಳಿಗೂ ಕೊಡತಕ್ಕಂಥ, ವ್ಯವಸ್ಥೆ ಇತ್ತು. ಇದನ್ನು ಸಂಪೂರ್ಣವಾಗಿ ತಡೆಗಟ್ಟತಕ್ಕಂಥ ವ್ಯವಸ್ಥೆಯಿದು. ಅದ್ದರಿಂದ ತಾವು ದಯವಿಟ್ಟು ಮೊಬೈಲ್ ವ್ಯಾನನಲ್ಲಿ ಒಂದು ಟೀಮ್ ಕಳುಹಿಸಿ ಇಡೀ ರಾಜ್ಯಾದ್ಯಂತ ಎಲ್ಲೆಲ್ಲಿ ಹೆಚ್ಚು ಕಪ್ಪು ತಲೆ ಹುಳುವಿನ ರೋಗವಿದೆ ಅವುಗಳಿಗೆ ಸರ್ಕಾರ ವಾರ್ ಫುಟನಲ್ಲಿ ಕೆಲಸಗಳನ್ನು ಕೈಗೊಂಡು ಔಷಧಿಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡಿದರೆ ತೆಂಗಿನ ಮರಗಳು ಉಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ ಈ ರೋಗಗಳ ಹಬ್ಬಿರುವ ಬಗ್ಗೆ ನಮಗೂ ಕಾಗದೆಗಳು ಬಂದಿವೆ, ಚಿತ್ರಗಳು ಬಂದಿವೆ. ಇದರ ಬಗ್ಗೆ ಶಿವಮೊಗ್ಗ ಜಿಲ್ಲೆ ಮತ್ತು ಬೇರೆ ಜಿಲ್ಲೆಗಳಿಂದ ದೂರುಗಳು ಬಂದಿವೆಯಾದ್ದರಿಂದ ಸರ್ಕಾರ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಅಧ್ಯಕ್ಷರೇ, ಈ ರೋಗವನ್ನು ತಡೆಗಟ್ಟುವುದಕ್ಕೆ, ತೆಂಗು ಸಂಶೋಧನಾ ಕೇಂದ್ರವನ್ನು ತೆರೆಯಬೇಕಾಗುತ್ತದೆ. ಏಕೆಂದರೆ 60 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೆಂಗಿನ ತೋಟಗಳಿವೆ. ಈಗ ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಹೇಳಿದ ಹಾಗೆ ಈಗ ಏನು ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಅದು ಸಾಲದು. ನಾನು ತಮ್ಮ ಮುಖಾಂತರ ಸಚಿವರನ್ನು ಕೇಳುತ್ತಿದ್ದೇನೆ ಇದರ ಬಗ್ಗೆ ಕ್ರಮಬದ್ಧವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು.

ಶ್ರೀ ಬಸವರಾಜ್ : ಅಧ್ಯಕ್ಷರೇ, ನಮ್ಮ ಸ್ನೇಹಿತರಾದ ಕೃಷ್ಣಮೂರ್ತಿಯವರು ಕೇಳಿದ ಹಾಗೆ ಹೊಸದುರ್ಗ ತಾಲ್ಲೂಕ್ ಶಿರಾಪುರ ಹೋಬಳಿಯಲ್ಲಿ ಬಹಳಷ್ಟು ತೆಂಗಿನ ತೋಟಗಳಿಗೆ ಈ ರೋಗ ಹಬ್ಬಿದೆ. ಈಗಾಗಲೇ ನಾವು ಮಾನ್ಯ ಭೈರೇಗೌಡರ ಹತ್ತಿರ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಇದರ ಬಗ್ಗೆ ಕಡೂರ ತಾಲ್ಲೂಕಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವುದರ ಜೊತೆಗೆ ನಮ್ಮ ತಾಲ್ಲೂಕಿಗೂ ಕೂಡ ಗಮನವನ್ನು ಕೊಟ್ಟು ಕ್ರಮವನ್ನು ತೆಗೆದುಕೊಳ್ಳಬೇಕು. ಏಕೆಂದರೆ 'ವೇತವತಿ' ಯಿಂದ ಪೂರ್ವ ಭಾಗಕ್ಕೆ ಹೆಚ್ಚು ತೆಂಗಿನ ಮರಗಳನ್ನು ನಾವು ಬೆಳೆಸಿ ತೆಂಗನ್ನು ಬೆಳೆದಿದ್ದೇವೆ. ಇದರ ಬಗ್ಗೆ ಗಮನ ಹರಿಸಬೇಕು.

ಅಧ್ಯಕ್ಷರು : ಅಲ್ಲಿಯೂ ಕೂಡ ವ್ಯವಸ್ಥೆಯನ್ನು ಸೂಕ್ತವಾಗಿ ಮಾಡಿಸುತ್ತಾರೆ.

ಶ್ರೀ ಕೆ.ಎಸ್. ಕೃಷ್ಣಮೂರ್ತಿ : ಅಧ್ಯಕ್ಷರೇ, ಬರೀ ಕಡೂರು ತಾಲ್ಲೂಕು ಒಂದರಲ್ಲೇ ಅಲ್ಲ. ಅರಸೀಕೆರೆ ತಾಲ್ಲೂಕು, ಕಡೂರು ತಾಲ್ಲೂಕು, ಹೊಸದುರ್ಗ ತಾಲ್ಲೂಕಿನಲ್ಲಿ ಈ ರೋಗ ಇದೆ. ಇದರ ಬಗ್ಗೆ ತೀವ್ರವಾದ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕು. ಇಲ್ಲದೇ ಇದ್ದರೆ ರೈತರಿಗೆ ಎಷ್ಟು ಅನ್ಯಾಯವಾಗುತ್ತದೆ ಲೆಕ್ಕ ಹಾಕಿ.

ಅಧ್ಯಕ್ಷರು : ಸರ್ಕಾರ ಕ್ರಮವನ್ನು ಕೈಗೊಳ್ಳತ್ತದೆ ಅಂದರೆ ಈಗ ಅವರು ಸ್ಪೇಯರ್ ತೆಗೆದುಕೊಂಡು ನಿಮ್ಮ ಜೊತೆ ಕುಳಿತುಬಿಡಬೇಕೇ ಆಯಿತು ಮಾಡುತ್ತಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಇದನ್ನು ರೈತರಿಗೆ ನಾವು ಜವಾಬ್ದಾರಿ ಬಿಟ್ಟರೆ ಆಗುವುದಿಲ್ಲ. ಒಂದು ಮೊಬೈಲ್ ಯುನಿಟ್ ಮಾಡಿ ಇದನ್ನು ನಿಯಂತ್ರಣ ಮಾಡದೇ ಇದ್ದರೆ ಬಹಳ ನಷ್ಟವಾಗುತ್ತದೆ.

ಶ್ರೀ ಬಿ. ನಂಜಾಮರಿ : ಅಧ್ಯಕ್ಷರೇ, ಈ ರೋಗದ ಬಗ್ಗೆ 1995 ಮಾರ್ಚ್ ಕೊನೆಗೆ ತಿಪಟೂರು ತಾಲ್ಲೂಕಿಗೆ 21 ಲಕ್ಷ ಮತ್ತ ಗುಬ್ಬಿ ತಾಲ್ಲೂಕಿಗೆ 22 ಲಕ್ಷ ರೂ. ಗಳನ್ನು ಹಣ ಬಂದಿದೆ. ಇದುವರೆಗೂ ಮರಗಳನ್ನು ತೆಗೆದು ಆಗಿದೆ, ಸಸಿಗಳನ್ನು ಕೂರಿಸಿಯಾಗಿದೆ. ಆದರೆ ಹಣದ ಯಾವುದೋ ಒಂದು ಅವ್ಯವಹಾರವಾಗಿದೆ ಎನ್ನುವ ದೃಷ್ಟಿಯಿಂದ ಇದನ್ನು ತಡೆ ಹಿಡಿದಿದ್ದಾರೆ. ಹಣ ಇದುವರೆಗೂ ಯಾವ ರೈತನಿಗೂ ಹೋಗಿಲ್ಲ. ಹಣ ಇದೆ, ಚಿಕ್ಕನಾಯಕನ ಹಳ್ಳಿಯಲ್ಲಿ ಸುಮಾರು ಕಪ್ಪು ಹುಳ ರೋಗ ಬಂದಿದೆ.

ಅಧ್ಯಕ್ಷರು : ಬೇಗ ಬೇಗ ಮುಗಿಸಬೇಕು, ಎಲ್ಲರೂ ಮಾತನಾಡಲಿ ಎಂದು ಅವಕಾಶಗಳನ್ನು ಕೊಟ್ಟು ಉಪ ಪ್ರಶ್ನೆ ಕೇಳಿಸುತ್ತಿರುವುದು ಎಲ್ಲರೂ ಸಹಕರಿಸಬೇಕು.

ಶ್ರೀ ವಿಶ್ವೇಶ್ವರ ಹೆಗಡೆ : ಅಧ್ಯಕ್ಷರೇ, ಅಡಿಕೆ ಮತ್ತು ತೆಂಗೂ ಬೆಳೆಗಾರರ ಬಗ್ಗೆ ಒಂದೇ ಒಂದು ವಿನಂತಿ ಏನೆಂದರೆ ಮಲೆನಾಡಿಗೆ ಸಂಬಂಧಪಟ್ಟಂತೆ ಈ ತೆಂಗು ಮತ್ತು ಅಡಿಕೆ ತೋಟಕ್ಕೆ ರೋಗ ಬರುತ್ತಿರುವುದು. ಇದಕ್ಕೆ ಸಂಬಂಧಪಟ್ಟಂತೆ ವಿಟ್ಲದಲ್ಲಿ ಒಂದು ಸಂಶೋಧನ ಕೇಂದ್ರ ವಿದೆ. ಮತ್ತು ಧಾರವಾಡದಲ್ಲಿ ಬಯಲು ಸೀಮೆಯಲ್ಲಿ ಒಂದು ಸಂಶೋಧನಾ ಕೇಂದ್ರವಿದೆ. ಅಂದರೆ ಮಲೆನಾಡಿಗೆ ತಕ್ಕಂಥ ವಾತಾವರಣದಲ್ಲಿ ಅಲ್ಲಿಯ ಬೆಳೆಗೆ ಸಂಶೋಧನಾ ಕೇಂದ್ರವನ್ನು ಮಾಡುವುದು ಅವಶ್ಯಕತೆ ಇದೆ. ಅಂದರೆ ಇಟ್ಟ ಕೋಸ್ಟಲ್ ಬೆಲ್ಟ, ಆದರೆ ಇದು ಬಯಲು ಸೀಮೆ.

ಅಧ್ಯಕ್ಷರು : ಅಂಕೋಲಾದಲ್ಲಿ ಒಂದು ಬೇಕು ಎಂದು ಇಲ್ಲವೇ?

ಶ್ರೀ ವಿಶ್ವೇಶ್ವರ ಹೆಗಡೆ : ಶಿರಸಿಗೂ ಒಂದು ಬೇಕು ಎಂದು ಇದೆ. ರೀತಿಯಲ್ಲಿ ಮಲೆನಾಡಿಗೆ...

ಶ್ರೀ ಅರಗದ ಜ್ಞಾನೇಂದ್ರ : ತೀರ್ಥಹಳ್ಳಿಗೂ ಒಂದು ಬೇಕು.

ಅಧ್ಯಕ್ಷರು : ಇನ್ನು ಇದರ ಮೇಲೆ ಉಪ ಪ್ರಶ್ನೆ ಇಲ್ಲ. ನೋಡಿ ಅವರೆಲ್ಲರೂ ಕೇಳಿರುವುದು ಸಂಶೋಧನಾ ಕೇಂದ್ರಗಳು ಹೆಚ್ಚಾಗಬೇಕು. ಎಲ್ಲೆಲ್ಲಿ ಈ ರೋಗ ಹಬ್ಬಿದೆ ಅಲ್ಲೆಲ್ಲಾ ಈ ರೋಗವನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ಈ ರೋಗ ನಿಯಂತ್ರಣದಲ್ಲಿಲ್ಲವೆಂದು ಹೇಳಿದ್ದಾರೆ, ಅದು ನಿಯಂತ್ರಣಕ್ಕೆ ಬಂದಿದೆ. ಹೇಗೆಂದರೆ 94-95ನೇ ಸಾಲಿನಲ್ಲಿ ಬಹಳ ರೋಗ ಇತ್ತು. ಈಗಾಗಲೇ ನಾವು ಪೆರಿಸಿರೋಲ ಎನ್ನತಕ್ಕ ಪರೋಪ ಜೀವಿಗಳನ್ನು ಬಿಟ್ಟು ಅದನ್ನು ನಿಯಂತ್ರಣಕ್ಕೆ ತಂದಿದ್ದೇವೆ. ಇನ್ನೂ ಎಲ್ಲಾದರೂ ಇದೆ ಎಂದು ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಹೇಳಿದರೆ ಅಂಥಹ ಕಡೆಗೆ ನಮ್ಮ ಮೊಬೈಲ್ ವ್ಯಾನನ್ನೇ ಕಳುಹಿಸಿ ಅದನ್ನು ನಿಯಂತ್ರಿಸುವುದಕ್ಕೆ ಸರ್ವ ಪ್ರಯತ್ನಮಾಡುತ್ತೇವೆಂದು ಹೇಳಬಯಸುತ್ತೇನೆ.

ಬೆಳಗಾವಿ ಜಿಲ್ಲೆಯಲ್ಲಿ ಕೃಷಿ ಸಹಾಯಕರ ಹುದ್ದೆ ಭರ್ತಿ

322 - ಶ್ರೀ ಚಂದ್ರಶೇಖರ ನಾಯಕ (ಗೋಕಾಕ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಕೃಷಿ ಸಹಾಯಕರ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) ಗೋಕಾಕ್ ತಾಲ್ಲೂಕಿನಲ್ಲಿ ಖಾಲಿ ಇರುವ ಕೃಷಿ ಸಹಾಯಕ ಹುದ್ದೆಗಳೆಷ್ಟು?

ಇ) ಅವುಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) :

ಅ) 471.